Ref.No. 243/15

WW-5,

ದಿನಾಂಕಃ 04-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

2 ನೇ ಪಾರ್ಟಿ ನಂ.1 ರವರ ವಿರುದ್ದ ಎನ್ ಸಿ ಎಲ್ ಟಿ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ನಂ.1 ಸಂಸ್ಥೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಯೂನಿಯನ್ ಇರಲಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಈ ನ್ಯಾಯಾಲಯ ಕ್ಕೆ ಬಂದ ನಂತರ 2 ನೇ ಪಾರ್ಟಿ ನಂ.2 ರವರನ್ನು ಪಾರ್ಟಿ ಮಾಡಲಾಗಿರುತ್ತದೆ ಎಂದರೆ ಸರಿ . ನಾವು ಎನ್ ಸಿ ಎಲ್ ಟಿ ಮುಂದೆ ಅರ್ಜಿ ನಂ.40 ನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ಸದರಿ ಅರ್ಜಿಯನ್ನು ಎನ್ ಸಿ ಎಲ್ ಟಿ ಯವರು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಮ್ಮನಲ್ಲದೇ 2 ನೇ ಪಾರ್ಟಿ ನಂ.1 ರವರಿಗೆ ಸಾಲವನ್ನು ನೀಡಿದವರೂ ಕೂಡ ಎನ್ ಸಿಎಲ್ ಟಿ ಮುಂದೆ ಪಾರ್ಟಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಬೇಡಿಕೆಗೆ ಪೂರಕವಾಗಿ ಎನ್ ಸಿ ಎಲ್ ಟಿ ಯವರು ವಿಷನ್ ಟೆಕ್ಸಟೈಲ್ಸ್ ರವರಿಗೆ 35 ಲಕ್ಷವನ್ನು ನೀಡುವಂತೆ ಆದೇಶಿಸಿರುತ್ತದೆ ಎಂದರೆ ಸರಿ . ಎನ್ ಸಿ ಎಲ್ ಟಿ ಮುಂದೆ ಪ್ರಕರಣವು ಬಾಕಿ ಇರಬೇಕಾದರೆ ನಾವು ಸ್ಟೈಕ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ಸ್ಟೈಕ್ ಮಾಡಿದಾಗ ಆಡಳಿತ ವರ್ಗದವರು ನ್ಯಾಯಾಲಯ ಕ್ಕೆ ಹೋಗಿ ನಮ್ಮವಿರುದ್ದ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಎನ್ ಸಿ ಎಲ್ ಟಿ ರವರು 2 ನೇ ಪಾರ್ಟಿ ನಂ.1 ನ್ನು ಲಿಕ್ವಿಡೇಟ್ ಆಗಬೇಕು ಎಂದು ಆದೇಶಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಡಿಎಲ್ ಸಿ ಅವರ ಮುಂದೆ ವಿವಾದ ಎತ್ತಿದಾಗ 2 ನೇ ಪಾರ್ಟಿ ನಂ.2 ರವರನ್ನು ಪಾರ್ಟಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ ಯಲ್ಲ. ಸಾಕ್ಷಿದಾರರು ಮುಂದುವರೆದು ಆ ಕಲಾಕ್ಕೆ ವಿಷನ್ ಟೆಕ್ಸ ಟೈಲ್ಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ . ವಿಷನ್ ಟೆಕ್ಸಟೈಲ್ಸ್ ಮತ್ತು ನಮ್ಮ ಯೂನಿಯನ್ ನಡುವೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ವಿಷನ್ ಟೆಕ್ಸಟೈಲ್ಸ್ ರವರು ನಮ್ಮನ್ನು ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ ಹಾಗೂ ಸಂಬಳವನ್ನು ನೀಡಿರುವುದಿಲ್ಲ ಎಂದರೆ ಸರಿ. ನಾವು ಪರಿಹಾರವನ್ನು 2 ನೇ ಪಾರ್ಟಿ ನಂ.1 ರವರ ವಿರುದ್ದ ಕೇಳಿರುತ್ತೇವೆ 2 ನೇ ಪಾರ್ಟಿ ನಂ.2 ಮೇಲೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಇಬ್ಬರಿದ್ದಲೂ ಪರಿಹಾರವನ್ನು ಕೇಳಿರುತ್ತೇವೆ ಎಂದು ನುಡಿಯುತ್ತಾರೆ . 2 ನೇ ಪಾರ್ಟಿ ನಂ.2 ರವರು ನಮಗೆ ಯಾವುದೇ ಪರಿಹಾರವನ್ನು ನೀಡಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ 2 ನೇ ಪಾರ್ಟಿ ನಂ.1 ರವರು ಕಾರ್ಖಾನೆಗೆ ಬೀಗ ಮುದ್ರೆಯನ್ನು ಹಾಕಿದ ಸಮಯಕ್ಕೆ ಸಂಬಳವನ್ನು ನೀಡಬೇಕು ಎಂದು ಕೇಳಿರುತ್ತೇವೆ ಎಂದರೆ ಸರಿ . ನಾವು ಸ್ಟೈಕ್ ಮಾಡಿದ್ದರಿಂದ 2 ನೇ ಪಾರ್ಟಿ ನಂ.1 ರವರ ಲಾಕ್ ಔಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಸಂಬಳವನ್ನು ಕೇಳುವ ಮೊದಲೇ ಲಾಕ್ ಔಟ್ ಮಾಡಿದ್ದರು ಎಂದು ನುಡಿಯುತ್ತಾರೆ .

ನಾವು ಕೆಲಸ ಮಾಡದೇ ಸ್ಟ್ರೈಕ್ ಮಾಡಿದ್ದರಿಂದ ನಮಗೆ ಸಂಬಳವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಬೆಳಿಗಿನ ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಿದ್ದೆನು. ಬೆಳಗಿನ ಜಾವದಲ್ಲಿ ಲಾಕ್ ಔಟ್ ಆಗಿರುತ್ತದೆ. 2 ನೇ ಪಾರ್ಟಿ ನಂ.1 ಸಂಸ್ಥೆಯು ಮೂರು ಶಿಫ್ಟ್‌ನಲ್ಲಿ ನಡೆಯುತ್ತಿತ್ತು. ಹೊಸ ಶಿಫ್ಟ್‌ನ ಕೆಲಸಗಾರರರು ಒಳಗೆ ಬಂದ ನಂತರ ಹಳೆ ಶಿಫ್ಟ್‌ನ ಕೆಲಸಗಾರರರು ಹೊರಗೆ ಬರುತ್ತಿದ್ದರು ಎಂದರೆ ಸರಿ .ಹೊಸ ಶಿಫ್ಟ್‌ನವರು ಹಳೆ ಶಿಫ್ಟ್‌ನವರನ್ನು ರಿಲೀವ್ ಮಾಡುತ್ತಿದ್ದರು ಎಂದರೆ ಸರಿ . ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಲಾಕ್ ಔಟ್ ಮಾಡಲಾಗಿರುವುದಿಲ್ಲ ನಾವು ಕೆಲಸ ಮಾಡಿ ಹೊರಗೆ ಬಂದ ನಂತರ ಲಾಕ್ ಔಟ್ ಆಗಿರುತ್ತದೆ ಎಂದರೆ ಸರಿ. 2 ನೇ ಪಾರ್ಟಿ ನಂ.1 ಸಂಸ್ಥೆಯಲ್ಲಿ land loosers ಗಳಿಗೆ ಕೆಲಸವನ್ನು ನೀಡಲಾಗಿರುವುದಿಲ್ಲ. ಜನವರಿ 2013 ರಲ್ಲಿ 2 ನೇ ಪಾರ್ಟಿ ನಂ.1 ಯಲ್ಲಿ ಕೆಲಸ ಮಾಡಿರುವುದರ ಬಗ್ಗೆ ದಾಖಲಾತಿಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. ನಾನು 1 ನೇ ಪಾರ್ಟಿ ಯೂನಿಯನ್ ನ ಸದಸ್ಯ ಎಂದು ತೋರಿಸಲು ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. 2 ನೇ ಪಾರ್ಟಿ ನಂ.1 ರವರು ಜನವರಿ 2013 ರಿಂದ ಲಾಕ್ ಔಟ್ ಮಾಡಿರುವುದಿಲ್ಲ ಆದುದರಿಂದ ಸಂಬಳವನ್ನು ನೀಡಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . 2 ನೇ ಪಾರ್ಟಿ ನಂ.2 ಮತ್ತು ಲಾಕ್ ಔಟ್ ಗೂ ಯಾವುದೇ ಸಂಬಂಧ ಇರದೇ ಇರುವುದರಿಂದ ಅವರೂ ಕೂಡ ಸಂಬಳವನ್ನು ನೀಡಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪಾರ್ಟಿ ನಂ.2 ರವರು 2 ನೇ ಪಾರ್ಟಿ ನಂ .1 ಸಂಸ್ಥೆಯನ್ನು ಖರೀದಿಸುವುದರಿಂದ ಅವರು ಸಂಬಳವನ್ನು ನೀಡಲು ಭಾಧ್ಯಸ್ಥರಾಗಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ . 2 ನೇ ಪಾರ್ಟಿ ನಂ.2 ರವರು 2 ನೇ ಪಾರ್ಟಿ ನಂ .1 ಸಂಸ್ಥೆಯನ್ನು ಖರೀದಿಸಿದಾಗ 2 ನೇ ಪಾರ್ಟಿ ನಂ.1 ಸಂಸ್ಥೆಯು ಮುಚ್ಚಿತ್ತು ಎಂದರೆ ಸರಿ . 2 ನೇ ಪಾರ್ಟಿ ನಂ.1 ಮತ್ತು 2 ನೇ ಪಾರ್ಟಿ ನಂ.2 ರವರು ಯಾವುದೇ ವೇತನವನ್ನು ನೀಡಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.